ಬೆಳಗಾವಿ ಸ್ಮಾರ್ಟಸಿಟಿನಿಯಮಿತ
1ನೇ ಮಹಡಿ, ಬುಡಾಕಚೇರಿ,
ಅಶೋಕ ನಗರ, ಬೆಳಗಾವಿ-590 006.
ದೂರವಾಣಿ ಸಂ.:0831-2461352.

BELAGAVI SMART CITYLIMITED
1st Floor, BUDA Office,
Ashok Nagar, Belagavi-590 006.
Phone No.: 0831-2461352.

Website: www.belagavismartcity.in , Email: bscltd16@gmail.com TAN: BLRB14232B PAN: AAGCB9785J CIN: U74999KA2016PLC093099

ಸಂಖ್ಯೆ : ಬಿ.ಎಸ್.ಸಿ.ಎಲ್/ಟುಲಿಪ್-1/2020-21 ದಿನಾಂಕ : 23-07-2020

## ಅಧಿಸೂಚನೆ

### "TULIP ಕಾರ್ಯಕ್ರಮದಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ"

ಸ್ಮಾರ್ಟಸಿಟಿ ಯೋಜನೆಯ ನಿರ್ಣಾಯಕ ಸವಾಲುಗಳನ್ನು ಹೊಸಕಲ್ಪನೆ ಮತ್ತು ಶಕ್ತಿಯೊಂದಿಗೆ ಪರಿಹರಿಸಲು ಹಾಗೂ ಅಲ್ಪ ಕಾಲಾವಧಿಯಲ್ಲಿ ಹೊಸ ಪದವೀಧರರ ವೃತ್ತಿ ಕೌಶಲ್ಯವನ್ನು ಅನುಭವ ಕಲಿಕೆಯೊಂದಿಗೆ ಹೆಚ್ಚಿಸುವ ನಿಟ್ಟಿನಲ್ಲಿ ಸ್ಮಾರ್ಟಸಿಟಿ ಯೋಜನೆಯಡಿಯಲ್ಲಿ TULIP (The Urban Learning Internship Program) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಬೆಳಗಾವಿ ಸ್ಮಾರ್ಟಸಿಟಿ ಯೋಜನೆಯಲ್ಲಿ TULIP ಕಾರ್ಯಕ್ರಮದಡಿ ಕಾರ್ಯನಿರ್ವಹಿಸಲು Civil/Electrical/Computer Science/Information Technology ನಲ್ಲಿ ಹೊಸದಾಗಿ ಪದವಿ ಪಡೆದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಕುರಿತು ಹೆಚ್ಚಿನ ವಿವರಗಳನ್ನು ಬೆಳಗಾವಿ ಸ್ಮಾರ್ಟಸಿಟಿ ಲಿಮಿಟೆಡ್‌ನ ಅಧಿಕೃತ ಅಂತರ್ಜಾಲ "www.bscl.in" ನಲ್ಲಿ ಲಭ್ಯವಿರುತ್ತದೆ. ಆಸಕ್ತರು ತಮ್ಮ ಸ್ವ-ವಿವರ ಮತ್ತು ದಾಖಲೆಗಳೊಂದಿಗೆ ಅರ್ಜಿಯನ್ನು ದಿನಾಂಕ: 10 -08-2020 ರ ಸಂಜೆ 5-30 ರೊಳಗಾಗಿ ಸಲ್ಲಿಸಬಹುದಾಗಿದೆ.

**ಅರ್ಹತೆಯ ಮಾನದಂಡಗಳು**

- ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು.
- ಇಂಟರ್ನಶಿಪ್ ಅವಧಿಯು ಕನಿಷ್ಠ ಎಂಟು ವಾರದಿಂದ ಒಂದು ವರ್ಷದವರೆಗೆ ಮಾತ್ರ ಇರುತ್ತದೆ. ಸದರಿ ಅವಧಿಯನ್ನು ನಿರ್ಧರಿಸುವ ಹಕ್ಕು ಬೆಳಗಾವಿ ಸ್ಮಾರ್ಟಸಿಟಿ ಲಿಮಿಟೆಡ್‌ಗೆ ಇರುತ್ತದೆ.
- ಅಭ್ಯರ್ಥಿಯು ತಾನು ವ್ಯಾಸಂಗ ಮಾಡಿದ ಶಿಕ್ಷಣ ಸಂಸ್ಥೆಯ ಸಕ್ಷಮ ಪ್ರಾಧಿಕಾರದಿಂದ ಶಿಫಾರಸು ಪತ್ರವನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸುವುದು ಕಡ್ಡಾಯವಿರುತ್ತದೆ. ಶಿಫಾರಸು ಪತ್ರ ಲಗತ್ತಿಸದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಅಂತಿಮ ವರ್ಷದ ಫಲಿತಾಂಶ ಪ್ರಕಟಣೆಯ ದಿನಾಂಕದಿಂದ 18 ತಿಂಗಳುಗಳ ಒಳಗಾಗಿ ಇಂಟರ್ನಶಿಪ್‌ಗಾಗಿ ಕೋರಿಕೆಯನ್ನು ಸಲ್ಲಿಸಬೇಕು.
- ಅಭ್ಯರ್ಥಿಯು ಅರ್ಜಿಯೊಂದಿಗೆ 1000 ಪದಗಳಿಗೆ ಮೀರದಂತೆ ನಗರಗಳ ಸಮಸ್ಯೆಗಳ ಮೇಲೆ ಟಿಪ್ಪಣಿಯನ್ನು ಬರೆದು ಲಗತ್ತಿಸತಕ್ಕದ್ದು ಮತ್ತು ಸದರಿ ಟಿಪ್ಪಣಿಯು ಅಭ್ಯರ್ಥಿಗಳ ಆಸಕ್ತಿಯ ಕ್ಷೇತ್ರಗಳು, ಕೆಲಸ ಮಾಡಲು ಇಚ್ಛಿಸಿದ ಆಸಕ್ತಿಯ ಕ್ಷೇತ್ರಗಳು ಮತ್ತು ಇಂಟರ್ನಶಿಪ್ ಕೈಗೊಳ್ಳುವ ಉದ್ದೇಶಗಳನ್ನೊಳಗೊಂಡಿರಬೇಕು.
- ಅಧಿಕೃತ ಅಂತರ್ಜಾಲದ https://internship.aicte-india.org/module_ulb/Dashboard/TulipMain/index.php (TULIP Portal) ಮುಖಾಂತರ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಖುದ್ದಾಗಿ/ಅಂಚೆ/ಕೋರಿಯರ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

- **ಬೆಳಗಾವಿ ಸ್ಮಾರ್ಟಸಿಟಿ ಲಿಮಿಟೆಡ್, ಬೆಳಗಾವಿ**

| ಅ. ಸಂ. | ವಿವರ | ಇಂಟರ್ನಷಿಪ್‌ಗಳ ಸಂಖ್ಯೆ |
|---|---|---|
| 01 | ಅಭಿಯಂತರರು ಸಿವ್ಹಿಲ್ | 06 |
| 02 | ಅಭಿಯಂತರರು ಎಲೆಕ್ಟ್ರಿಕಲ್ | 02 |
| 03 | ಅಭಿಯಂತರರು ಐಟಿ/ಕಂಪ್ಯೂಟರ್ ಸೈನ್ಸ್ | 02 |

23/7/2020

ವ್ಯವಸ್ಥಾಪಕ ನಿರ್ದೇಶಕರು,
ಬೆಳಗಾವಿ ಸ್ಮಾರ್ಟ ಸಿಟಿ ಲಿಮಿಟೆಡ್,
ಬೆಳಗಾವಿ.

Scanned by CamScanner